**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 749/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಅನಿಲ್ ಕುಮಾರ್ | **ಚಾ.ಸಾ.-13** |
| ತಂದೆಯ ಹೆಸರು | - ಕೃಷ್ಣಪ್ಪ | **ಫ್ರಾ.ಸಾ.-9** |
| ವಯಸ್ಸು | - 42 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಶಿವಪುರ | |

ದಿನಾಂಕಃ 13.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2 ಸಿ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಸುಮಾರು 4 ವರ್ಷಗಳ ಹಿಂದೆ ಶಿವಪುರದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 2 ರಲ್ಲಿ ಪೋಲೀಸರು ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ನಿ.ಪಿ. 2 ದಾಖಲೆಗೆ ನನ್ನನ್ನು ಹೊರತುಪಡಿಸಿ ಚಾ.ಸಾ. 12 ರವರು ಸಹಿ ಮಾಡಿರುತ್ತಾರೆ, ಹಾಗೂ ಸ್ಥಳದಲ್ಲಿ ಎರಡು ಛಾಯಾಚಿತ್ರಗಳನ್ನು ಪೋಲೀರು ತೆಗೆದಿರುತ್ತಾರೆ. ಸದರೀ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 8 ಮತ್ತು 9 ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಯಾವುದೇ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮಹಜರ್ ಕ್ರಮ ಜರುಗಿಸಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿನಾಂಕಃ 23.11.2019 ರಂದು ಸಂಜೆ 04.15 ರಿಂದ 05.15 ಗಂಟೆಯವರೆಗೆ ಮದ್ದೂರಿನ ಶಿವಪುರದ ಚಾ.ಸಾ. 1 ಮತ್ತು ಆರೋಪಿತರು ವಾಸವಾಗಿದ್ದ ಮನೆಯಲ್ಲಿ ನಿಮ್ಮ ಹಾಗೂ ಚಾ.ಸಾ. 12 ರವರ ಸಮಕ್ಷಮ ನಿ.ಪಿ. 2 ರಂತೆ ಮಹಜರ್ ಕ್ರಮ ಜರುಗಿಸಿ,

ಮಹಜರ್ ನ ಸಂದರ್ಭದಲ್ಲಿ ನಿ.ಪಿ. 3 ರಿಂದ 5 ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡು ನಿ.ಪಿ. 8 ಮತ್ತು 9 ಛಾಯಾಚಿತ್ರಗಳನ್ನು ಸ್ಥಳದಲ್ಲಿಯೇ ತೆಗೆದಿರುತ್ತಾರೆಂದರೆ ಸರಿಯಲ್ಲ. ನಿ.ಪಿ. 2 ರಲ್ಲಿರುವ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿ

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಮದ್ದೂರು.